ದಿನಾಂಕ 16/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಶ್ರೀ ಪಿ.ಆರ್.ಪಿ. ಪ್ರತಿವಾದಿ ಪರ ವಕೀಲರಿಂದ**

ನಾನು 10 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಚಾರಗಳು ನನಗೆ ಗೊತ್ತಿರುತ್ತದೆ. ದಾವಾ ಸರ್ವೆ ನಂ- 43/2 ಇರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಜಮೀನು ಪಕ್ಕ ನನ್ನ ಜಮೀನಿನ ಎಂದು ಹೇಳಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿ ನಮ್ಮ ಜಮೀನಿನ ಪಕ್ಕ ಇರುವುದಿಲ್ಲ. ನಮ್ಮ ಜಮೀನು ಗಂಪಲಹಳ್ಳಿ ಆದ ಬಲ ಭಾಗಕ್ಕೆ ಬರುತ್ತದೆ. ನಮ್ಮ ಜಮೀನಿನ ವಾದಿಯ ಜಮೀನು 2 ಕಿ.ಮೀಟರ್ ಆಗುತ್ತದೆ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಫ್ರಾಸಾ-2 ರವರ ಜಮೀನು 2. ಕಿ.ಮೀಟರ್ ಆಗುತ್ತದೆ ಎಂದರೆ ಸರಿ. ದಾವಾ ಆಸ್ತಿಯಿಂದ ಫ್ರಾಸಾ-2 ರವರ ಜಮೀನು 4 ಕಿ.ಮೀಟರ್ ಆಗುತ್ತದೆ ಎಂದರೆ ಸರಿಯಲ್ಲ. ಗಂಪಲಹಳ್ಳಿ ಗ್ರಾಮದ ಹೀರಜಪ್ಪನ ಮಗ ವೀರಪ್ಪ ಎಂದರೆ ವಾದಿಯ ತಾತ ಎಂದರೆ ಸರಿ. ಹೀರಪ್ಪ ಬಿನ್ ಹೀರಪ್ಪ ಎಂದರೆ ವಾದಿಯ ತಂದೆ ಎಂದರೆ ಸರಿ.

3. ವಾದಿಯ ತಂದೆ ಮತ್ತು ತಾತ ಚಿಕ್ಕತಿಮ್ಮಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1967 ರಿಂದ ಇಲ್ಲಿಯವರೆಗೂ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯ ಪಹಣಿಯನ್ನು ವಾದಿ ಹೆಸರಿಗೆ ಬಂದಿದ್ದು ಅವರಿಗೆ ಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಪಹಣಿ ಅವಾಗ ಊರಲ್ಲಿ ಎಲ್ಲರಿಗೂ ಕೊಟ್ಟ ಹಾಗೆ ಅವರಿಗೆ ಕೊಟ್ಟಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ವಾದಿ

ಹೆಸರಿಗೆ ಪಹಣಿ ನೋಡಿದಾಗ ಜಮೀನಿನ ವಿಚಾರ ಗೊತ್ತಾಗಿರುತ್ತದೆ ಮೊದಲು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ನಮ್ಮ ಊರಿನವರು ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ